1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ

ಸಿ.ಸಿ. ನಂ. 20925-2024

ಸಿಡಬ್ಲೂ - 10ಪಿಡಬ್ಲೂ-7

ಸಾಕ್ಷಿದಾರರ ಹೆಸರು : ಸೋಹೆಲ್ ಖಾಲ್
ತಂದೆಯ ಹೆಸರು : ಗಫರ್ ಅಲಿ
ವಯಸ್ಸು : 36 ವರ್ಷ
ಕೆಲಸ : ಖಾಸಗಿ ಕೆಲಸ
ವಾಸ : ಬೊಮ್ಮನಹಳ್ಳಿ, ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 20-12-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ಆರೋಪಿಯನ್ನು ಭಾವಚಿತ್ರದಲ್ಲಿ ನೋಡಿರುತ್ತೇನೆ. ಡಿಸೆಂಬರ್ 2019 ರಲ್ಲಿ ನನಗೆ ಚಾಸಾ 27 ರವರಿಂದ ಒಂದು ಕರೆ ಬಂದಿದ್ದು, 2018ರಲ್ಲಿ ನಾನುಒಂದು ಪ್ಯಾನ್ಸಿ ನಂಬರ್ ನ್ನು ಪಡೆದುಕೊಳ್ಳಲು ಇಚ್ಚೆಸಿದ್ದು ಅದರಂತೆ ಫೇಸಬುಕ್ ನಲ್ಲಿ ಮಾರ್ಕೇಟ್ ಪೇಜ್ ನಲ್ಲಿ ಪರಿಶೀಲಿಸಿದ್ದು ಅದರಲ್ಲಿ ಪ್ಯಾನ್ಸಿ ನಂಬರ್ ಮತ್ತು ವಿವಿಐಪಿ ನಂಬರ್ ಎಂದು ಕಂಡು ಬರುತ್ತಿದ್ದು ಅದರಲ್ಲಿ ಒಂದು ಲಿಂಕ್ ನ್ನು ನೀಡಿದ್ದು, ಆ ಲಿಂಕ್ ಮೂಲಕ ವಾಟ್ಸ ಆಪ್ ಗೆ ಕನೆಂಟ್ ಆಗಿದ್ದು ನಾನು ಹಾಯ್ ಎಂಬುದಾಗಿ ಮೇಸೇಜ್ ಮಾಡಿರುತ್ತೇನೆ. ಅದಕ್ಕೆ ಆರೋಪಿಯಿಂದ ಉತ್ತರ ಬಂದ ಕಾರಣ ನನಗೆ ಪ್ಯಾನ್ಸಿ ನಂಬರ್ ಬೇಕು ಎಂಬುದಾಗಿ ಮೇಸಜ್ ಮಾಡಿರುತ್ತೇನೆ.

ನಂತರ ರೂ. 600/- ಗೂಗಲ್ ಪೇ ಮೂಲಕ ಪಾವತಿಸಿರುತ್ತೇನೆ. ನನ್ನ ಮೊಬೈಲ್ ನಂ. 9845737296 ಸಂಖ್ಯೆಯನ್ನು ಪಡೆದಿರುತ್ತೇನೆ. ಈಗಲೂ ಸಹ ಅದನ್ನು ಉಪಯೋಸುತ್ತಿದ್ದೇನೆ, ನಂತರ ಆರೋಪಿಯು ಒಂದು ಬ್ಲಾಕ್ ಸೀಮ್ ನ್ನು ನನಗೆ ನೀಡಿರುತ್ತಾರೆ. ಅದನ್ನು ಸಹ ನಾನು ಬಳಕೆ ಮಾಡುತ್ತಿದ್ದೇನೆ. ನಾನು ಆರೋಪಿಯ ಜೊತೆಯಲ್ಲಿ ವಾಟ್ಸಆಪ್ ನಲ್ಲಿ ಚಾರ್ಟ ಮಾಡಲಾದ ಮಾಹಿತಿಯ ದಾಖಲೆಯನ್ನು ನೋಡಿದರೆ ಗುರುಡಿಸುತ್ತೇನೆ.

ಸಾಕ್ಷಿಯು ದೋಷಾರೋಪಣ ಪತ್ರ ಪುಟಸಂಖ್ಯೆ 366 ರಿಂದ 370 ರವರೆಗಿನ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.7 ಎಂದು

ಗುರುತಿಸಲಾಯಿತು. ಈ ಮೇಲಿನ ವಿಚಾರವಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಆರೋಪಿಯನ್ನು ನೋಡಿರುವುದಿಲ್ಲ. ಈ ವಿಚಾರವಾಗಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರ ವಕೀಲರು ಪಾಟೀ ಸವಾಲನ್ನು ಮಾಡಲು ಸಮಯಾವಕಾಶವನ್ನು ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ